ಪರಿಹಾರವನ್ನು ಹುಡುಕಬೇಕೆಂದು ಹೇಳಿ ಹಿಂದಿನ ಸರ್ಕಾರಗಳು ಸಹ ಅನೇಕ ಪ್ರಯತ್ನಗಳನ್ನು ಮಾಡಿ ಬಜೆಟ್‌ನಲ್ಲಿ ನಮ್ಮ ರಾಜ್ಯಪಾಲರ ವರದಿಯಲ್ಲಿಯೂ ಕೂಡ mention ಮಾಡಿ ಎತ್ತಿನಹೊಳೆ ಯೋಜನೆ ಮತ್ತು ಪರಮಶಿವಯ್ಯನವರ ವರದಿಯ ಅನುಷ್ಠಾನದ ಬಗ್ಗೆ ಅದನ್ನು ವಿಶೇಷವಾಗಿ ಈ ಸದನದಲ್ಲಿ ಚರ್ಚೆ ಮಾಡುವ ಬಗ್ಗೆ ಒಂದೆರಡು ದಿವಸ ಅಧಿವೇಶನವನ್ನು ಮೀಸಲಿಡಬೇಕೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಯಾವ ವಿಚಾರದ ಬಗ್ಗೆ ಕೇಳುತ್ತಿದ್ದೀರಿ?

ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ : ಎರಡು ವಿಷಯಗಳ ಬಗ್ಗೆ ಕೊಟ್ಟಿದ್ದೇನೆ.

ಅಧ್ಯಕ್ಷರು : ಇಲ್ಲಿ ಬಂದಿರುವುದು ಗೌರಿಬಿದನೂರಿನ ತಾಲ್ಲೂಕಿನ ಅನಧಿಕೃತ ಮಧ್ಯದಂಗಡಿ ಬಗ್ಗೆ. ಎರಡರಲ್ಲಿ ಒಂದರ ಬಗ್ಗೆ ಪ್ರಸ್ತಾಪ ಮಾಡಿ.

ಶ್ರೀ ಎಂ.ಹೆಚ್.ಶಿವಶಂಕರರೆಡ್ಡಿ : ಆಯಿತು.

(4) ವಿಷಯ : ಗೌರಿಬಿದನೂರು ತಾಲ್ಲೂಕಿನಲ್ಲಿ ಅನಧಿಕೃತ ಮಧ್ಯದಂಗಡಿಗಳ ಹಾವಳಿ ಬಗ್ಗೆ.

ಶ್ರೀ ಎಂ.ಹೆಚ್.ಶಿವಶಂಕರರೆಡ್ಡಿ : (ಗೌರಿಬಿದನೂರು): ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಸರ್ವೆ ಸಾಮಾನ್ಯವಾಗಿ ಅನಧಿಕೃತವಾದ ಮಧ್ಯದಂಗಡಿಗಳಿವೆ. ಸ್ಥಳೀಯ Exercise Department ಮತ್ತು ಪೊಲೀಸ್ ಇಲಾಖೆಗಳಿಗೆ ಬಹಳಷ್ಟು ಬಾರಿ ಹೇಳಿದ್ದರೂ ಕೂಡ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಲೈಸೆನ್ಸ್ ಅಂಗಡಿಗಳಿಗೂ ಅನಧಿಕೃತ ಅಂಗಡಿಗಳಿಗೂ ಏನು ವ್ಯತ್ಯಾಸವೇ ಇಲ್ಲ. ಸರ್ವೆಸಾಮಾನ್ಯವಾಗಿ ಎಲ್ಲಾ ಹಳ್ಳಿಯಲ್ಲೂ ಇವೆ. ಪ್ರತಿ ಹಳ್ಳಿಯಲ್ಲೂ ಕೂಡ ವಾತಾವರಣವನ್ನು ಕೆಡಿಸಿದ್ದಾರೆ. ಇಲಾಖೆಯಿಂದ ಕಟ್ಟುನಿಟ್ಟಾಗಿ ಇದಕ್ಕೆ ಕಡಿವಾಣ ಹಾಕುವ ಕೆಲಸವಾಗಬೇಕೆಂಬುದು ನನ್ನ ಮನವಿ.

ಶ್ರೀ ಸತೀಶ್ ಜಾರಕಿಹೊಳಿ(ಅಬಕಾರಿ ಸಚಿವರು): ಮಾನ್ಯ ಅಧ್ಯಕ್ಷರೆ, ಗೌರಿಬಿದನೂರು ತಾಲ್ಲೂಕಿನ ಕೆಲವು ಹಳ್ಳಿಯಲ್ಲಿ ಅನಧಿಕೃತ ಸ್ಥಳಗಳಲ್ಲಿ ಮದ್ಯ ಮಾರಾಟದ ಬಗ್ಗೆ ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇಂತಹ ಅಕ್ರಮ ಮಾರಾಟವನ್ನು ತಡೆಗಟ್ಟುವಲ್ಲಿ ಕಾನೂನಿನ ರೀತ್ಯಾ ಕ್ರಮ ಜರುಗಿಸಲಾಗುತ್ತಿದೆ. ರಾಜ್ಯದಾದ್ಯಂತ ಕಳೆದ ಮೂರು

ವರ್ಷಗಳಲ್ಲಿ ಅನಧಿಕೃತ ಸ್ಥಳಗಳಲ್ಲಿ ಮದ್ಯ ಮಾರಾಟ/ ಸೇವನೆ ಬಗ್ಗೆ ದಾಖಲು ಮಾಡಿದ ಪ್ರಕರಣಗಳು ಈ ಕೆಳಕಂಡಂತಿವೆ. ಇಂತಹ ಪ್ರಕರಣಗಳು ಇಲಾಖಾ ಮೂಲಕ ದಂಡ ವಿಧಿಸಿ, ಇತ್ಯರ್ಥಪಡಿಸಬಹುದಾದ ಪ್ರಕರಣಗಳಾಗಿರುತ್ತವೆ. ಈ ಕುರಿತು ವಸೂಲಾದ ದಂಡದ ವಿವರಗಳು ಸಹ ಈ ಕೆಳಕಂಡಂತಿದೆ.

ಕ್ರ ಸಂ	ವರ್ಷ	ಅನಧಿಕೃತ ಸ್ಥಳಗಳಲ್ಲಿ ಮದ್ಯ ಸೇವನೆ ಬಗ್ಗೆ ದಾಖಲು ಮಾಡಿದ ಪ್ರಕರಣ	ಸನ್ನದು ಷರತ್ತು ಉಲ್ಲಂಘನೆ ಸಂಬಂಧ ದಾಖಲು ಮಾಡಿದ ಪ್ರಕರಣಗಳು	ವಸೂಲಾದ ದಂಡದ ಮೊತ್ತ (ಕೋಟಿ.ರೂ.ಗಳಲ್ಲಿ)	ಗೌರಿಬಿದನೂರು ತಾಲ್ಲೂಕಿನಲ್ಲಿ ಅನಧಿಕೃತ ಸ್ಥಳಗಳಲ್ಲಿ ಮದ್ಯ ಸೇವನೆ ಬಗ್ಗೆ ದಾಖಲು ಮಾಡಿದ ಪ್ರಕರಣ	ಗೌರಿಬಿದನೂರು ತಾಲ್ಲೂಕಿನಲ್ಲಿ ವಸೂಲಾದ ದಂಡದ ಮೊತ್ತ ರೂ.ಗಳಲ್ಲಿ
1	2010–11	3042	3396	10.29	31	54.000
2	2011–12	3235	6175	9.41	43	64,000
3	2012–13	5288	4487	9.06	26	40,500

ಈ ಕುರಿತು ವಸೂಲಾದ ದಂಡಗಳ ಮೂಲಕ ನಮ್ಮ ಇಲಾಖೆ ನಿಯಂತ್ರಣ ಮಾಡುವುದಕ್ಕೆ ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದೆ. ಹಾಗೂ ಇನ್ನು ಮುಂದೆ ಈ ರೀತಿ ಆಗದ ರೀತಿ ನಮ್ಮ ಇಲಾಖೆ ಕ್ರಮ ಕೈಗೊಳ್ಳುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಸಚವರೆ, ಈ ಸಮಸ್ಯೆಗಳು ನಮ್ಮ ಭಾಗದಲ್ಲೂ ಕೂಡ ಇವೆ.

ಶ್ರೀ ಸತೀಶ್ ಜಾರಕಿಹೊಳಿ : ಹೌದು, ಈ ಸಮಸ್ತೆ ಇಡೀ ರಾಜ್ಯದಲ್ಲಿದೆ.

ಅಧ್ಯಕ್ಷರು : ದಯವಿಟ್ಟು ಇದರ ಬಗ್ಗೆ ಒಂದು ವಿಶೇಷವಾದಂತಹ ಕಾರ್ಯಕ್ರಮವನ್ನು ರೂಪಿಸಿ ಇದನ್ನು ತಡೆಗಟ್ಟುವ ಕೆಲಸವನ್ನು ಮಾಡಿ.

ಶ್ರೀ ಸತೀಶ್ ಜಾರಕಿಹೊಳಿ : ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ನಿರ್ದಿಷ್ಟವಾದಂತಹ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಬಿ.ಆರ್.ಪಾಟೀಲ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಇದು ನಿಮಗೆ ಬರುವುದಿಲ್ಲ.

ಶ್ರೀ ಬಿ.ಆರ್.ಪಾಟೀಲ್ : ಹೌದು ಬರುವುದಿಲ್ಲ. ತಾವು ಇದಕ್ಕೆ ಧ್ವನಿಗೂಡಿಸಿದ್ದೀರಿ ತಮಗೆ ಅಭಿನಂದನೆಗಳು. ಮಾನ್ಯ ಶಾಸಕರು ಪ್ರಸ್ತಾಪಿಸಿರುವ ಈ ಸಮಸ್ಯೆ ಎಷ್ಟು ಗಂಭೀರವಾಗಿದೆಯೆಂದರೆ ಇಡೀ ಹಳ್ಳಿಯಲ್ಲಿ ಇವತ್ತು ಅಶಾಂತಿ ವಾತಾವರಣ ನಿರ್ಮಾಣವಾಗಿದೆ. ಚುನಾವಣೆಯಲ್ಲಿ ಪ್ರತಿ ಹಳ್ಳಿಗೆ ಭೇಟಿ ನೀಡಿದಾಗ ವಿಶೇಷವಾಗಿ ಹೆಣ್ಣುಮಕ್ಕಳು 'ನಮಗೇನೂ ಸಹಾಯ ಮಾಡಬೇಡಿ ಮೊದಲು ಈ ಮದ್ಯದಂಗಡಿಗಳನ್ನು ಬಂದ್ ಮಾಡಿ ಎಂದು' ಕೇಳಿಕೊಳ್ಳುತ್ತಿದ್ದರು. ಅಷ್ಟೊಂದು ಪಾಪದ ಕೆಲಸ ನನ್ನ ಭಾಗದಲ್ಲಿದೆ. ಇಂದು ಚಹಾ ಅಂಗಡಿಯಲ್ಲಿ, ಪಾನ್‌ಬೀಡಾ ಅಂಗಡಿಯಲ್ಲಿ, ಕಿರಾಣಿ ಅಂಗಡಿಗಳಲ್ಲಿ ಎಲ್ಲಿ ನೋಡಿದರಲ್ಲಿ ಮೊಬೈಲ್ ಶಾಪ್‌ಗಳಾಗಿವೆ. ಏನಾದರಾಗಲಿ ಸರ್ಕಾರಕ್ಕೆ ಬೊಕ್ಕಸ ತುಂಬಬೇಕು. ಸರ್ಕಾರದ ಬೊಕ್ಕಸ ತುಂಬಿ ಜನರ ಜೀವನವನ್ನು ಹಾಳು ಮಾಡುತ್ತಿದ್ದಾರೆ. ಜನರ ಜೀವನಕ್ಕಿಂತ ನಿಮ್ಮ ಬೊಕ್ಕಸವೇನೂ ಬಹಳ ಮಹತ್ವದ್ದಲ್ಲ. ದಯಮಾಡಿ ಅದನ್ನು ಖಂಡಿತವಾಗಿ ನಿಲ್ಲಿಸಬೇಕು. ನಾನು ಇಲಾಖೆಯವರೊಂದಿಗೆ ಮಾತನಾಡಿದೆ. ಅವರು ನಮ್ಮಲ್ಲಿ ಯಾರೂ ಗಾರ್ಡ್‌ಗಳಿಲ್ಲ, sufficient staff ಗಳಿಲ್ಲ, ನಾವೇನು ಮಾಡುವುದು?

ಎರಡೆರಡು ತಾಲ್ಲೂಕುಗಳನ್ನು ನೋಡಿಕೊಳ್ಳಬೇಕೆಂದು ಹೇಳುತ್ತಾರೆ. ಇದೇ ಸಂದರ್ಭದಲ್ಲಿ ಮತ್ತೆ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. sufficient ಆಗಿ ಸಿಬ್ಬಂದಿಗಳನ್ನು ತುಂಬಿಕೊಳ್ಳುವಂತಹ ಕೆಲಸವನ್ನು ಮಾಡಿ. ಇಲ್ಲವಾದಲ್ಲಿ ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ಪೊಲೀಸರಿಗೆ ಕೂಡ ಕಾನೂನಿನಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೂ ಕೂಡ ಅಧಿಕಾರವಿದೆ. ಮೊದಲು ಅವರಿಗೆ ಆ ಒಂದು ಅಧಿಕಾರವಿರಲಿಲ್ಲ. ಪೋಲಿಸರು ಯಾರೂ ಕೂಡ ನಿಯಂತ್ರಣ ಮಾಡುವುದಿಲ್ಲ. ಎಲ್ಲರೂ ಅವರ ಜೊತೆಗೆ ಶಾಮೀಲಾಗಿದ್ದಾರೆ. ಇಂತಹ ಕೆಲಸಗಳನ್ನು ಸರ್ಕಾರ ನಿಲ್ಲಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇಷ್ಟು ಕೇಸ್ ಮದ್ಯವನ್ನು ಮಾರಾಟ ಮಾಡಬೇಕೆಂದು ಸರ್ಕಾರವೇ ನಿಗದಿ ಮಾಡಿದೆ. ಅರಸೀಕೆರೆ ತಾಲ್ಲೂಕಿನಲ್ಲಿ 27,500 ಕೇಸ್ ಮದ್ಯವನ್ನು ಮಾರಾಟ ಮಾಡಲೇಬೇಕು. ಇಲ್ಲವಾದರೆ ಸಂಬಳವನ್ನು cut ಮಾಡುತ್ತೇವೆಂದು ಹೇಳುತ್ತಾರೆ. ಪಾಪ, ಅವರೇನು ಮಾಡುತ್ತಾರೆ? ಈ ರೀತಿ ಅಕ್ರಮವಾಗಿ ತೆಗೆದುಕೊಂಡು ಹೋಗಿ ಮಾರುತ್ತಾರೆ. ಸರ್ಕಾರದ ತಪ್ಪಿಟ್ಟುಕೊಂಡು ಎಲ್ಲರನ್ನೂ ಬೈದರೆ ಆಗುತ್ತದೆಯೇ?

ಅಧ್ಯಕ್ಷರು : ಈ ವಿಷಯ ನನಗೂ ಕೂಡ ಬಹಳ ಚೆನ್ನಾಗಿ ಗೊತ್ತಿದೆ. ಅದಕ್ಕೆ ನಾನು ಮಾನ್ಯ ಸಚಿವರಿಗೆ ಈ ಸಂಬಂಧ ಒಂದು ವಿಶೇಷ ಕಾರ್ಯಕ್ರಮವನ್ನು ಹಾಕಿಕೊಳ್ಳುವಂತೆ ಹೇಳಿದ್ದೇನೆ. ಏಕೆಂದರೆ ವೈನ್ ಶಾಪ್‌ಗಳಲ್ಲಿ, ಚಿಲ್ಲರೆ ಅಂಗಡಿಗಳಲ್ಲಿ ಸಂಜೆ 6–7 ಗಂಟೆಗೆ ಹೋದರೆ ಕ್ಯೂ ನಿಂತಿರುತ್ತಾರೆ.

ಶ್ರೀ ಬಿ.ಆರ್.ಪಾಟೀಲ್ : ಟೀ ಕೊಡುವ ರೀತಿಯಲ್ಲಿ ಮದ್ಯವನ್ನು ಕೊಡುತ್ತಾರೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಮನೆಗೆ ತೆಗೆದುಕೊಂಡು ಹೋಗಿ ಕುಡಿಯಬಹುದು.

(5) ವಿಷಯ : ಬೆಂಬಲ ಬೆಲೆಯೊಂದಿಗೆ ಕೊಬ್ಬರಿ ಖರೀದಿ ಮಾಡುವ ಬಗ್ಗೆ.

ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ಕೊಬ್ಬರಿ ಬಗ್ಗೆ ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಕಾರಣವೇನೆಂದರೆ ಇಂದು ಅತ್ಯಂತ ಭೀಕರ ಬರಗಾಲ ಎದುರಾಗಿದೆ. ನಾನೂ